**ಸಾಕ್ಷಿಯನ್ನು ದಿನಾಂಕ:10.04.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃಆರೋಪಿ ಪರ ಶ್ರೀ. ಕೆ ಎನ್ ಎ ವಕೀಲರಿಂದಃ**

ನಿಪಿ.1ನ್ನು ನಾನು ಹೇಳಿದಂತೆ ನಮ್ಮ ಡಿಎಸ್ಐ ಸಾಹೇಬರು ಪೊಲೀಸ್ ಠಾಣೆಯ ಬಳಿ ಬರೆದಿರುತ್ತಾರೆ. ನಿಪಿ.1ರಲ್ಲಿ ಇಬ್ಬರ ಹೆಸರನ್ನು ಬರೆಸಿದ್ದೆ, ಇನ್ನಿಬ್ಬರ ಹೆಸರು ಗೊತ್ತಿರದ ಕಾರಣ, ಬರೆಸಿರಲಿಲ್ಲ. ಆ ರೀತಿ ಇಬ್ಬರ ಹೆಸರನ್ನು ಗಲಾಟೆ ಬಿಡಿಸಿದವರು ಹೇಳಿದ ಕಾರಣ, ಬರೆಸಿರುತ್ತೇನೆ. ನಾನು ಹಲ್ಲೆ ಮಾಡಿದ್ದರು ಎಂದು ಹೇಳುವ ವ್ಯಕ್ತಿಗಳ ಪರಿಚಯ ನನಗೆ ಮೊದಲು ಇಲ್ಲ. ನಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ. ನಾನು ಆ ದಿನ ಮೊದಲು ಆಸ್ಪತ್ರೆಗೆ ಹೋಗಿ ನಂತರ ಠಾಣೆಗೆ ಹೋಗಿರುತ್ತೇನೆ. ನಾನು ಆ ದಿನ ಆಸ್ಪತ್ರೆಗೆ ದಾಖಲಾಗಿರಲಿಲ್ಲ. ನಾನು ಕೇವಲ ಕುಣಿಗಲ್ ಸರ್ಕಾರಿ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆದಿದ್ದೆ. ಆಸ್ಪತ್ರೆಗೆ ಹೋದಾಗ ವೈದ್ಯರಿಗೆ ನನ್ನ ಮೇಲೆ ಹಲ್ಲೆ ಮಾಡಿದವರ ಹೆಸರು ಆಗ ನನಗೆ ಗೊತ್ತಿರದ ಕಾರಣ ಹೇಳಿರಲಿಲ್ಲ.

2. ನಿಪಿ.2ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ.2ರ ವೇಳೆಯಲ್ಲಿ ಇನ್ನು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆ ದಿನ ನನ್ನ ಸಮವಸ್ತ್ರ ಹರಿದಿರಲಿಲ್ಲ. ನನ್ನ ಸಮವಸ್ತ್ರದ ಗುಂಡಿಗಳು ಕಿತ್ತು ಹೋಗಿರಲಿಲ್ಲ. ನನ್ನ ಸಮವಸ್ತ್ರವನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಿಪಿ.1ರಲ್ಲಿ ನನ್ನ ಕಪಾಳದ ಬಲಭಾಗಕ್ಕೆ ಆರೋಪಿತರು ಹೊಡೆದಿದ್ದರು ಎಂದು ಬರೆಸಿರುತ್ತೇನೆ. ಕಪಾಳದ ಬಲಭಾಗಕ್ಕೆ ಆರೋಪಿತರು ಹೊಡೆದಿದ್ದರು ಎಂದು ವೈದ್ಯರಿಗೆ ಹೇಳಿ ಬರೆಸಿದ್ದೇನೆ. ನಿಪಿ.1ರಲ್ಲಿ ಇಬ್ಬರು ಹೆಸರು

ಗೊತ್ತಿರಲಿಲ್ಲ ಎಂದು ಬರೆಸಿರುತ್ತೇನೆ.

3. ನಿಪಿ.2ರಲ್ಲಿ ವೈಟ್ನರ್ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಸರ್ಕಲ್ ನಲ್ಲಿ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಡಿವೈಡರ್ ನ ಉತ್ತರ ದಿಕ್ಕಿಗೆ ಒಂದೇ ಸಲಕ್ಕೆ ಎರಡು ಬಸ್ಸುಗಳು ಹೋಗುವಷ್ಟು ಜಾಗವಿತ್ತು. ಘಟನೆ ನಡೆದ ತಕ್ಷಣವೇ ನಾನು ಪೊಲೀಸ್ ಠಾಣೆಗೆ ಹೋಗಿ ನಿಪಿ.1ರ ದೂರು ನೀಡಲು ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು, ಆಸ್ಪತ್ರೆಗೆ ಹೋಗಬೇಕಿದ್ದ ಕಾರಣ, ತಕ್ಷಣ ನೀಡಿರಲಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆಯಿತು ಎಂದು ಹೇಳುವ ಜಾಗದ ಪಶ್ಚಿಮ ಮತ್ತು ಪೂರ್ವಕ್ಕೆ ಸಾಕಷ್ಟು ಅಂಗಡಿಗಳಿವೆ ಎಂದರೆ ಸಾಕ್ಷಿಯು ಎಡಕ್ಕೆ ಮತ್ತು ಬಲಕ್ಕೆ ಇವೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಎಡಗಡೆಯ ಭಾಗದ ಕೆಲವು ಅಂಗಡಿಗಳು ತೆರೆದಿದ್ದವು. ಸದರಿ ಅಂಗಡಿಯವರು ಪೊಲೀಸರಿಗೆ ಮಾಹಿತಿ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

4. ನಮ್ಮ ಬಸ್ಸಿನ ಪ್ರಯಾಣಿಕರಿಗೆ ಬೇರೆ ಬಸ್ಸಿಗೆ ಹೋಗಲು ವ್ಯವಸ್ಥೆ ಮಾಡಲಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು, ಅದು ನಿರ್ವಾಹಕರ ಕರ್ತವ್ಯ ಎಂದು ನುಡಿಯುತ್ತಾರೆ. ನಿಪಿ.1ರಲ್ಲಿ ನಮ್ಮ ಬಸ್ಸಿನ ಪ್ರಯಾಣಿಕರಿಗೆ ಬೇರೆ ಬಸ್ಸಿಗೆ ಹೋಗಲು ವ್ಯವಸ್ಥೆ ಮಾಡಲಾಗಿತ್ತು ಎಂದು ನಾನು ಬರೆಸಿರುವುದಿಲ್ಲ.

5. ನನಗೆ ಕರ್ತವ್ಯದ ಲಾಗ್ ಪುಸ್ತಕವನ್ನು ದೂರು ನೀಡುವ ದಿನವೇ ಪೊಲೀಸರಿಗೆ ನೀಡಿದ್ದೆ. ಸದರಿ ಲಾಗ್ ಪುಸ್ತಕದ ದಾಖಲೆಗೆ ನಾನು ಮತ್ತು ನಿರ್ವಾಹಕರು ಸಹಿ ಮಾಡಿ

ನೀಡಿರಲಿಲ್ಲ.

6. ಚಾಸಾ.5 ನನ್ನ ಸೋದರ ಮಾವ ಎಂದರೆ ಸರಿಯಲ್ಲ. ಸದರಿಯವರು ನ್ಯಾಯಾಲಯದಲ್ಲಿ ನನ್ನನ್ನು ಅವರ ಸೋದರ ಅಳಿಯ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಚಾಸಾ.4 ರವರು ನನ್ನ ಸೋದರ ಮಾವ ಎಂದರೆ ಸರಿಯಲ್ಲ. ಆರೋಪಿತರು ನಾನು ಹೇಳುವಂತೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಕರ್ತವ್ಯಕ್ಕೆ ಅಡ್ಡಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ನಿಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಅವರ ವಿರುದ್ದ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ವಿನಾಕಾರಣ ಆರೋಪಿತರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್